ಹೊಸ ಪಠ್ಯಕ್ರಮ (೨೦೦೫-೨೦೦೬ ಶೈಕ್ಷಣಿಕ ವರ್ಷದಲ್ಲಿ ಅಭ್ಯಾಸ ಮಾಡಿದ ವಿದ್ಯಾರ್ಥಿಗಳಿಗೆ)
**New Scheme** ( For Students studied during the Year 2005-2006 )

**Code No. 01-NS**

Total No. of Questions : 50 ] [ Total No. of Printed Pages : 7

**July, 2006**

# KANNADA

**( New Syllabus )**

Time : 3 Hours ] [ Max. Marks : 90

## ಅ – ವಿಭಾಗ

I. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದೊಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ : 10 × 1 = 10

1) ಸರೋವರದಿಂದ ಬಕಪಕ್ಷಿಗಳು ಹಾರಿಹೋದುದು ಏಕೆ ?

2) ಕಾಯಕವನ್ನು ಹೇಗೆ ಮಾಡಬೇಕು ?

3) ಕವಿದ ಕತ್ತಲೆಯೊಳಗೆ ಚಂದ್ರಮತಿ ಹೇಗೆ ನಿಂತಿದ್ದಳು ?

4) ಕಪ್ಪು ಕೇಶಗಳು ಏನನ್ನು ಸೂಚಿಸುತ್ತವೆ ?

5) ದೇವರ ವಿಗ್ರಹಗಳನ್ನು ಮೊಮ್ಮಕ್ಕಳು ಏನೆಂದು ತಿಳಿದಿದ್ದರು ?

6) ಹೆಣ್ಣು ಹೇಗಿರಬೇಕೆಂಬ ಪಾಠಗಳು ಜೊಹರಾಳಿಗೆ ಎಲ್ಲಿ ದೊರೆಯಿತು ?

7) ನೀಫೆ ಯಾರು ?

[ Turn over

8) ಕಾಡಿನಲ್ಲಿ ಮರ ಕಡಿಸುತ್ತಿರುವವನು ಯಾರು ?

9) ಕೌರವ ಪಾಂಡವರು ವಿದ್ಯೆ ಕಲಿತು ಏನು ಮಾಡುತ್ತಾರೆ ಎಂದು ದ್ರೋಣ ಚಿಂತಿಸುತ್ತಾನೆ ?

10) ಯುದಿಷ್ಠಿರನ ದೃಷ್ಟಿಯಲ್ಲಿ ನಿಜವಾದ ದುಷ್ಟತನ ಯಾವುದು ?

## ಆ – ವಿಭಾಗ

II. ಅ) ಕೆಳಗಿನ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ : $4 \times 2 = 8$

11) ರೈತರು ಹೊಟ್ಟೆಗಾಗಿ ಹೇಗೆ ಶ್ರಮಪಡುತ್ತಾರೆ ?

12) ಮಡದಿ ಮರದ ಬೊಂಬೆಯಾಗುವುದು ಯಾವಾಗ ?

13) ರಾಮ, ಅಲ್ಲಾ ಎಲ್ಲಿದ್ದಾರೆಂದು ಕವಿ ಹೇಳಿದ್ದಾರೆ ?

14) ಕಾಡಿನಿಂದ ಲೋಹಿತಾಶ್ವ ಬರದಿದ್ದಾಗ ಚಂದ್ರಮತಿ ಏನೆಂದು ಯೋಚಿಸಿದಳು ?

15) ತಂಗಿ ಹುಟ್ಟಿದಾಗ ಅಕ್ಕನ ಪ್ರತಿಕ್ರಿಯೆ ಹೇಗಿತ್ತು ?

ಆ) ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ : $3 \times 2 = 6$

16) ಟ್ಯಾಕ್ಸಿ ಲೇಖಕರ ಬಳಿ ಹೇಗೆ ಬಂದು ನಿಂತಿತು ?

17) ಸಂಸ್ಕೃತಿಯ ಆತ್ಮಗೌರವ ಯಾವಾಗ ವರ್ಧಿಸುತ್ತದೆ ?

18) ಮರಿಸ್ಸಾ ಹುಟ್ಟಿದ ತಕ್ಷಣ ಬೋನ್ ಮ್ಯಾರೋ ವರ್ಗಾವಣೆ ಏಕೆ ಸಾಧ್ಯವಾಗಲಿಲ್ಲ ?

19) ಸುಮತಿಯ ಕಥೆಯಲ್ಲಿ ಶೆಟ್ಟಿಯು ರಾಜನಿಗೆ ಏನೆಂದು ದೂರಿದನು ?

ಇ) ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ : $3 \times 2 = 6$

20) ಏಕಲವ್ಯನನ್ನು ಗಾಳಣ್ಣ ಹೇಗೆ ಪರಿಚಯಿಸುತ್ತಾನೆ ?

21) ಅಸಮಾನತೆ ನಿಸರ್ಗ ಸಹಜ ಎಂದು ದ್ರೋಣಾಚಾರ್ಯರು ಹೇಳುವ ಬಗೆ ಯಾವುದು ?

22) ಹೆಂಡತಿಗೆ ಹೆದರಿದ ಒಬ್ಬ ಸೈನಿಕ ಅವಳ ಹೊಡೆತದಿಂದ ತಪ್ಪಿಸಿಕೊಳ್ಳಲು ಏನು ಮಾಡಿದನು ?

23) ಕೃಷ್ಣನ ಬಗೆಗೆ ಅರ್ಜುನ ಯಾವ ಭಾವನೆ ಹೊಂದಿದ್ದನು ?

## ಇ - ವಿಭಾಗ

III. ಅ) ಕೆಳಗಿನ ಯಾವುದಾದರೂ ಎರಡಕ್ಕೆ ಸಂದರ್ಭ ಸೂಚಿಸಿ ಟಿಪ್ಪಣಿ ಬರೆಯಿರಿ : $2 \times 3 = 6$

24) ಎಲವೋ-ಮರುಳೇ ಬರ್ದುಕಲ್ ಬಗೆವಾ.

25) ನಡೆಯಿಲ್ಲದ ನುಡಿ ಅರವಿಂಗೆ ಹಾನಿ.

26) ಮೇಲೆ ನೋಟ ನಕ್ಷತ್ರ, ಕಣ್ಣಲಗೆ ಚಂದಿರ.

ಆ) ಕೆಳಗಿನ ಯಾವುದಾದರೂ ಒಂದು ವಾಕ್ಯವನ್ನು ಕುರಿತು ಸಂದರ್ಭ-ಸ್ವಾರಸ್ಯವನ್ನು ಬರೆಯಿರಿ : $1 \times 3 = 3$

27) ಯಾ ಅಲ್ಲಾ, ನನ್ನನ್ನು ಯಾಕಾದರೂ ಇನ್ನೂ ಉಳಿಸಿದ್ದೀಯಾ ?

28) ನನಗೆ ಈಗ ಟಿಪ್ ತೆಗೆದುಕೊಳ್ಳಲು ಯಾವ ಅರ್ಹತೆಯೂ ಇಲ್ಲ.

ಇ) ಕೆಳಗಿನ ಯಾವುದಾದರೂ ಒಂದು ವಾಕ್ಯವನ್ನು ಕುರಿತು ಸಂದರ್ಭ-ಸ್ವಾರಸ್ಯವನ್ನು ಬರೆಯಿರಿ : $1 \times 3 = 3$

29) ನನ್ನ ಶಕ್ತಿಯ ಮಿತಿ ಈಗ ಅರಿವಾಗ್ತಾ ಇದೆ.

30) ನನ್ನದು ಇಲ್ಲದವರ ಪರ ಹೋರಾಟ.

## ಈ – ವಿಭಾಗ

IV. ಅ) ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : $3 \times 4 = 12$

31) ಕಪ್ಪು-ಶಕ್ತಿ ಸಾಮರ್ಥ್ಯದ ಪ್ರತೀಕವೆಂದು ಪೂರ್ವಾಂಗನೆ ಹೇಗೆ ಸ್ಪಷ್ಟಪಡಿಸಿದ್ದಾಳೆ ?

32) ಭೀಮಾಲಾಪದಲ್ಲಿ ವ್ಯಕ್ತವಾಗುವ ಭೀಮನ ತೊಳಲಾಟವನ್ನು ವಿವರಿಸಿ.

33) ನಿಜವಾದ ಮಂದಿರ, ಮಸೀದಿ, ಇಗರ್ಜಿಗಳು ಎಲ್ಲಿವೆಯೆಂದು ಕವಿ ಹೇಳುತ್ತಾನೆ ?

34) ಹೆಣ್ಣುಮಗು ಹುಟ್ಟಿದಾಗ ತಂದೆ-ತಾಯಿ ಹಾಗೂ ಬಂಧು ವರ್ಗದವರ ಪ್ರತಿಕ್ರಿಯೆಗಳನ್ನು ವಿವರಿಸಿ.

ಆ) ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : $2 \times 4 = 8$

35) ಕುವೆಂಪುರವರ ಮಂಗಳಾರತಿಯ ಪ್ರಸಂಗದ ಸ್ವಾರಸ್ಯವನ್ನು ವಿವರಿಸಿ.

36) ಟ್ಯಾಕ್ಸಿ ಹತ್ತಿದ ಲೇಖಕರು ಹೆದರಿದ ಪರಿಯನ್ನು ವಿವರಿಸಿ.

37) ನಾಲ್ವರು ಭಟರು ಕುರಿಯನ್ನು ಸುಟ್ಟು ತಿಂದ ಪ್ರಸಂಗವನ್ನು ವಿವರಿಸಿ.

ಇ) ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : $2 \times 4 = 8$

38) ಹಾಡುಗಾರರು ಏಕಲವ್ಯನ ಕಥೆಯನ್ನು ಏನೆಂದು ಬಣ್ಣಿಸುತ್ತಾರೆ ? ವಿವರಿಸಿ.

39) ಅಶ್ವತ್ಥಾಮ ಏಕಲವ್ಯನನ್ನು ಕಂಡು ಬೆಂಬಲಿಸಿ ಮಾತನಾಡಿ ಸಮಾಧಾನಪಡಿಸುವುದನ್ನು ವಿವರಿಸಿ.

40) ಪಾಂಡವರನ್ನು ಬೆಂಬಲಿಸಲು ಏಕಲವ್ಯ ನಿರಾಕರಿಸುವುದು ಏಕೆ ?

## ಉ – ವಿಭಾಗ

V. ಅ) ಕೆಳಗಿನ ಯಾವುದಾದರೂ ಒಂದು ಪದ್ಯಕ್ಕೆ ಭಾವಾರ್ಥವನ್ನು ಬರೆಯಿರಿ : $1 \times 5 = 5$

41) ಆ ರವಮಂ ನಿರ್ಜಿತ ಕಂ
ಠೀರವರವಮಂ ನಿರಸ್ತ ಘನರವಮಂ ಕೋ
ಪಾರುಣ ನೇತ್ರಂ ಕೇಳ್ದಾ
ನೀರೊಳಗಿರ್ದುಂ ಬೆಮರ್ತನುರಗ ಪತಾಕಂ.

[ Turn over

42) ತಲೆಯ ಮೇಲೆ ಬಿಜಲಿನ ಕಾವು

ಹೊಟ್ಟೆಯೊಳಗೆ ಹಸಿವಿನ ಗಾವು

ಜೀವನವೆಲ್ಲ ಕುದ್ದು ಕುದ್ದು

ಆವಿಯಾಗಿ ಹೋದವರು

ನಿತ್ಯ ನಿತ್ಯ ಹೊಟ್ಟೆಯಿಂದ

ಹಸಿವನ್ನು ಹೆತ್ತವರು.

ಆ) ಭಾಷಾಭ್ಯಾಸ

ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ : $3 \times 2 = 6$

43) ಈ ಪದಗಳಿಗೆ ಅರ್ಥ ಬರೆಯಿರಿ :

ನಿಕಾಯ, ಸುತ.

44) ಈ ಪದಗಳ ನಿಷೇದ ರೂಪ ಬರೆಯಿರಿ :

ಬರು, ಹಾಡು.

45) ರೂಢ ನಾಮಕ್ಕೆ ಎರಡು ಉದಾಹರಣೆ ಕೊಡಿ.

46) ಈ ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ಪ್ರಯೋಗಿಸಿ :

ಮೊರೆಹೋಗು, ಕಾಲಿಗೆ ಬುದ್ಧಿ ಹೇಳು.

ಇ) ಕೆಳಗಿನ ಯಾವುದಾದರೂ ಒಂದನ್ನು ಕುರಿತು ಪ್ರಬಂಧ ಬರೆಯಿರಿ : $1 \times 5 = 5$

47) ಕ್ರೀಡೆಗಳ ಮಹತ್ವ

48) ರೈತರ ಸಮಸ್ಯೆಗಳು

ಈ) ಪತ್ರಲೇಖನ

49) ನಿಮ್ಮ ಊರಿನ ರಸ್ತೆ ದುರಸ್ತಿಯ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಪತ್ರ ಬರೆಯಿರಿ. $1 \times 4 = 4$

ಅಥವಾ

50) 'ಸುನಾಮಿ ದುರಂತ'ದ ಒಂದು ಕಾಲ್ಪನಿಕ ಶಬ್ದ ಚಿತ್ರವನ್ನು ಬರೆಯಿರಿ.